4313 (4946) ಶ್ರೀ ದಿನೇಶ್ ಗುಂಡೂರಾವ್ (ಗಾಂಧೀನಗರ) :- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸಕಾಲದಲ್ಲಿ ಹಣ ಪಾವತಿಸಿಲ್ಲವೆಂಬ ಕಾರಣಕ್ಕೆ ಕೊಳಚೆ ಪ್ರದೇಶದ ನಿವಾಸಿಗಳ ಹಾಗೂ ಬಡವರ ವಿದ್ಯುತ್ ಹಾಗೂ ನೀರಿನ ಸಂಪರ್ಕ ಕಡಿದು ಹಾಕಿದ್ದು ಅಂತಹವರ ಆಸ್ತಿ ಹರಾಜಿಗೆ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇತರ ಜನರಂತೆ ನೀರು ಹಾಗೂ ವಿದ್ಯುತ್ ಸಂಪರ್ಕ ಈ ಜನರ ಕನಿಷ್ಠ ಅವಶ್ಯಕತೆಯಲ್ಲಿವೆ.

ಇ) ಹಾಗಿದ್ದಲ್ಲಿ, ಅಸಲನ್ನೇ ಪಾವತಿಸಲು ಶಕ್ತಿಯಿಲ್ಲದ ಬಡವರು 5-10 ಸಾವಿರ ಬಡ್ಡಿ ಹಣ ಪಾವತಿಸಲು ಸಾಧ್ಯವೆ;

ಈ) ಗ್ರಾಮೀಣ ಬಡಜನರು ಹಾಗೂ ನಗರದ ಬಡಜನರ ನಡುವೆ ಸರಕಾರ ತಾರತಮ್ಯ ನೀತಿ ಅನುಸರಿಸುತ್ತಿರುವುದು ನಿಜವಲ್ಲವೇ;

ಉ) ಹಾಗಿದ್ದಲ್ಲಿ, ರೈತರ ಬಡ್ಡಿ ಮನ್ನಾ ಮಾಡಿದಂತೆ ಬೆಂಗಳೂರು ನಗರದ ಬಡಜನರ ವಿದ್ಯುತ್ ಹಾಗೂ ನೀರಿನ ಬಿಲ್ಲಿನ ಬಡ್ಡಿ ಮನ್ನಾ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮುಖ್ಯ ಮಂತ್ರಿಗಳು) :

ಅ) ನೀರಿನ ಬಿಲ್ಲನ್ನು ಪಾವತಿ ಮಾಡದ ಗ್ರಾಹಕರ ನೀರಿನ ಸಮರ್ಪಕವನ್ನು ಕಡಿದುಹಾಕಲಾಗುವುದು. ಹಾಗೂ ವಿದ್ಯುತ್ ಬಿಲ್ಲಿನ ಮೊತ್ತವನ್ನು ಗ್ರಾಹಕರು ಪಾವತಿಸದಿದ್ದಲ್ಲಿ, ನಿಯಮಾವಳಿಗಳ ಪ್ರಕಾರ ಅಂತಹ ಸ್ಥಾವರಗಳಿಗೆ ತಾರತಮ್ಯವಿಲ್ಲದ ವಿದ್ಯುತ್ ನಿಲುಗಡೆಯನ್ನು ಬೆ.ವಿ.ಕಂ.ನಿ ಎಲ್ಲಾ ಕಡೆಗಳಲ್ಲಿ ಮಾಡಲಾಗುತ್ತಿದೆ. ಕೆ.ಇ.ಆರ್.ಸಿ. ನಿಯಮಾವಳಿಗಳ ಪ್ರಕಾರ ಇದನ್ನು ಪಾಲಿಸಲಾಗುತ್ತಿದೆ. ಬೆಸ್ಕಾಂ ವತಿಯಿಂದ ಆಸ್ತಿ ಹರಾಜಿನಂತಹ ಕ್ರಮವನ್ನೇನೂ ತೆಗೆದುಕೊಂಡಿರುವುದಿಲ್ಲ.

ಆ) ಹೌದು.

ಇ) ಗ್ರಾಹಕರು ತಾವು ಬಳಕೆ ಮಾಡಿರುವ ನೀರಿನ ಪ್ರಮಾಣಕ್ಕನುಗುಣವಾಗಿ ಪಾವತಿ ಮಾಡಬೇಕಾಗಿರುತ್ತದೆ ಮತ್ತು ಅವಧಿ

ನಂತರ ಪಾವತಿ ಮಾಡುವ ಅಥವಾ ಪಾವತಿ ಮಾಡದೇ ಬಾಕಿ ಉಳಿಸಿಕೊಂಡಿರುವ ಮೊತ್ತದ ಮೇಲೆ ಬಡ್ಡಿ ನೀಡಬೇಕಾಗಿರುತ್ತದೆ.

ಪ್ರತಿ ತಿಂಗಳಿನಲ್ಲಿ ಬಳಸಿದ ವಿದ್ಯುತ್ ಯೂನಿಟ್‌ಗಳ ಬಿಲ್ಲಿನ ಮೊತ್ತವನ್ನು ಪಾವತಿಸಲು ಗ್ರಾಹಕರಿಗೆ ಸಾಕಷ್ಟು ಕಾಲಾವಕಾಶವನ್ನು ನಿಯಮಾವಳಿಗಳ ಪ್ರಕಾರ ನೀಡಲಾಗುತ್ತಿದೆ. ಆದಾಗ್ಯೂ ಬಳಸಿದ ವಿದ್ಯುತ್ತಿನ ಮೊತ್ತವನ್ನು ಪಾವತಿಸದಿದ್ದಲ್ಲಿ ಅಂತಹ ಎಲ್ಲಾ ಸ್ಥಾವರಗಳಿಗೆ ವಿದ್ಯುತ್ ಸಮರ್ಪಕ ಕಡಿತ ಗೊಳಿಸಬೇಕಾಗಿರುವುದು ನಿಯಮಾವಳಿಗಳ ರೀತ್ಯಾ ಅನಿವಾರ್ಯ ವಾಗಿರುತ್ತದೆ.

ಈ) ವಿದ್ಯುತ್ ದರದ ಆಕರಣೆಯನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ನಿಯಮಾವಳಿಗಳ ಪ್ರಕಾರ ಮಾಡಲಾಗುತ್ತಿದೆ.

ಉ) ಬೆಂಗಳೂರು ಜಲಮಂಡಳಿಯಿಂದ ನೀರಿನ ಬಿಲ್ಲಿನ ಬಾಕಿ ಪಾವತಿ ಮಾಡುವ ಸಲುವಾಗಿ ಗ್ರಾಹಕರಿಗೆ ಸುಲಭ ಕಂತು ಸೌಲಭ್ಯ ನೀಡಲಾಗಿದೆ. ಬಾಕಿ ನೀರಿನ ಬಿಲ್ಲಿನ ಬಡ್ಡಿ ಮನ್ನಾ ಬಾಕಿ ವಿದ್ಯುತ್ ಬಿಲ್ಲಿನ ಬಡ್ಡಿ ಮನ್ನಾ ಮಾಡುವ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

4315 (4786) ಶ್ರೀ ಈಶ್ವರಪ್ಪ ಕೆ.ಎಸ್. (ಶಿವಮೊಗ್ಗ) :– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ನಗರ ಪ್ರದೇಶದ ಕುಡಿಯುವ ನೀರಿನ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಶಿವಮೊಗ್ಗ ನಗರದ ಕುಡಿಯುವ ನೀರಿಗಾಗಿ ಮಂಜೂರು ಮಾಡಲಾಗುವ ಹಣವೆಷ್ಟು; ಹಾಗೂ ಸದರಿ ಹಣವನ್ನು ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಹೌದು.

ಆ) ರೂ.28.00 ಕೋಟಿ ಮಂಜೂರು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.